‘ಆದರೂ ನಮ್ಮಿಂದ ಈ ಸಂಬಂಧ ತಪ್ಪಿದ ಶಾಪ ನಮಗೆ ತಟ್ಟದೆ ಇರಲ್ಲ. ನಾನು ಯಾವತ್ತು ಈ ವಿಷಯಾನ... ನಾನೇ ಮಾತ್ರವಲ್ಲ, ನಮ್ಮ ಸಂಘದ ಯಾರೂ ಹೊರಗಡೆ ಎಲ್ಲೂ ಮಾತಾಡಕೂಡದು ಅಂತ ತೀರ್ಮಾನ ಮಾಡಿಕೊಂಡಿದ್ದೀವಿ. ಇವತ್ತೇನೋ ಬಾಯಿ ತಪ್ಪಿ ಮೂರು ಸಾವಿರದ ಮನೆ ಅಂದುಬಿಟ್ಟೆ. ಹಾಗಾಗಿ’ ಎನ್ನುತ್ತಾ ಮೌನರಾದರು. ‘ಅದೇ ಅಂದುಕೊಂಡೆ ವಿಶ್ವನಾಥ ಶೆಟ್ಟರೇ, ಇಂಥ ವಿಷಯಗಳು ನಮ್ಮ ಸಮುದಾಯದಲ್ಲಿ ಬೇಗ ಹರಡುತ್ತೆ. ಹೇಗೆ ನಮ್ಮ ಕಿವಿಗಿದು ಬಿದ್ದಿಲ್ಲ ಅಂತ... ಈಗ ಗೊತ್ತಾಯ್ತು. ಅದು ಸರಿ, ಅದೇನದು ಮೂರುಸಾವಿರದ ಮನೆ?’ ಎಂದು ಕುತೂಹಲದಿಂದ ಶೆಟ್ಟರ ಮುಖ ನೋಡಿದರು. ‘ಅದೇ... ಅವರ ತಂದೆಯವರ ಸಾವಿಗೆ ಯಾರೂ ಹೋಗಲಿಲ್ಲ ಅಂದೆನಲ್ಲ... ಮಾರನೆದಿನ ಇಪ್ಪತ್ತೊಂಬತ್ತು ಮನೆಗಳಿಂದ ನೂರು ರೂಪಾಯಿಯ ದಂಡ ಮತ್ತೆ ಹೆಚ್ಚುವರಿ ನೂರು ರೂಪಾಯಿ ಸೇರಿಸಿ ಮೂರು ಸಾವಿರ ರೂಪಾಯಿಯನ್ನು ಸಂಘಕ್ಕೆ ನಾನೇ ಕಟ್ಟಿಬಂದೆ. ಆಗಿಂದ ಆ ಮನೇನ ಮೂರು ಸಾವಿರದ ಮನೆ ಅಂತೀವಿ ಅಷ್ಟೆ. ಆಮೇಲೆ ಅವರಿಗೆ ತುಂಬಾ ಬೇಜಾರಾಗಿ ನಮ್ಮೆಲ್ಲರ ಹತ್ರ ವ್ಯವಹಾರಾನೇ ನಿಲ್ಲಿಸಿ ಬಿಟ್ರು. ಸಂಘದಿಂದ ಅವರ ಹೆಸರನ್ನು ಹೊಡೆದು ಹಾಕಿ ತಮ್ಮಷ್ಟಕ್ಕೆ ತಾವು ಒಂಟಿ ಬಡುಕರ ಹಾಗೆ ಇರ್ತಾರೆ. ನಾನೂ ಒಂದೆರಡು ಸಲ ಹೋಗಿ ಬುದ್ಧಿ ಹೇಳಿದೆ. ಇದೆಲ್ಲ ಬೆಳಸಬಾರದು. ನೀವು ಮಾಡಿದ್ದಕ್ಕೆ ಎಲ್ಲರೂ ಹಾಗೆ ಮಾಡಿರೋದು ಅಂತ. ಆದ್ರೆ ಅವರಿಗೆ ತುಂಬಾ ಮನಸ್ಸು ಘಾಸಿಯಾಗಿದೆ. ‘ನಾವು ಮಾಡಿದ್ದು ತಪ್ಪಿರಬಹುದು. ಹಂಗಂತ ನೀವು ನಮ್ಮ ಅಂತಹ ಕಷ್ಟದಲ್ಲಿ ಕೈ ಬಿಟ್ರಲ್ಲ. ನಮ್ಮ ಬೀಗರು ಬಂಧುಗಳೆದುರು ನಮಗೆ ಅವಮಾನವಾಯಿತು. ‘ಇವರಿಗೆ ಜನರೇ ಇಲ್ಲ’ ಅಂತ ಅವರೆಲ್ಲಾ ಆಡಿಕೊಂಡರು. ಇನ್ನು ಈ ಊರಲ್ಲಿದ್ದು ಪ್ರಯೋಜನವೇನು?’ ಅಂತ ಮುನಿಸಿಕೊಂಡು ಮಾತಾಡಿದರು. ನಾವು ಅಷ್ಟಕ್ಕೇ ಬಿಟ್ಟು ಸುಮ್ಮನಾಗಿದೀವಿ ಅಂದರು. ಬಂದಿದ್ದ ಗಂಡಹೆಂಡತಿಯರು ಗಂಭೀರವಾದರು. ಮುಖ ಮುಖ ನೋಡಿಕೊಂಡರು. ‘ನಮಗ್ಯಾಕೋ ಆ ಮನೆಗೆ ಹೆಣ್ಣು ನೋಡೋಕೇ ಹೋಗೋದೇ ಬೇಡ ಅನ್ಸುತ್ತೆ’ ಎಂದು ಶ್ರೀಮಂತರು ಹೇಳಿದಾಗ, ವಿಶ್ವನಾಥಶೆಟ್ಟರು ಮಾತ್ರ ಅಂಗಲಾಚುತ್ತ ‘ಹಂಗೆಲ್ಲಾದ್ರೂ ಮಾಡಿಬಿಡಬೇಡಿ. ದೊಡ್ಡವರ ತಪ್ಪಿಗೆ ಮಕ್ಕಳೇನು ಮಾಡಕ್ಕಾಗುತ್ತೆ? ಈಗ ನಿಮ್ಮ ಕಾರು ನಮ್ಮನೆ ಮುಂದೆ ನಿಂತಿರೋದು ಎಲ್ರಿಗೂ ಗೊತ್ತಾಗುತ್ತೆ. ನಾವೇ ಹೇಳಿಕೊಟ್ಟಿದೀವಿ ಅಂತ ಆಗುತ್ತೆ. ಪಾಪ... ಯಾವತ್ತೋ ಆಗಿದ್ದಕ್ಕೆ ಈವತ್ಯಾಕೆ ಶಿಕ್ಷೆ ಹೇಳಿ’ ಎಂದರು.

ಬಂದ ಶ್ರೀಮಂತರು ಮಾತ್ರ ಪಟ್ಟುಬಿಡದೆ ‘ನೋಡಿ ಯಜಮಾನ್ರೆ ನಿಮ್ಮ ಮನಸ್ಸು ದೊಡ್ಡದು. ನೀವೀ ಮಾತು ಹೇಳ್ತೀದೀರ. ನೀವು ಈ ವಿಷ್ಯದ ಬಗ್ಗೆ ಬೇಜಾರು ಮಾಡ್ಕೋಬೇಡಿ. ನಿಮ್ಮ ಮಾತು ನಾವೆಲ್ಲೂ ಎತ್ತೋದಿಲ್ಲ. ಈಗ ನಿಮ್ಮ ಮೇಲೆ ಅಪವಾದ ಬರದ ಹಾಗೆ ನಾವು ಆ ಮನೆಗೆ ಹೋಗಿ ಹೆಣ್ಣುನೋಡಿದ ಶಾಸ್ತ್ರ ಮಾಡ್ತೀವಿ. ಇಲ್ಲಿಗೆ ಬಂದು ಊಟ ಮಾಡಿಕೊಂಡು ಪ್ರಯಾಣ ಮಾಡ್ತೀವಿ. ನೀವು ಈ ವಿಷಯ ಹೇಳಿದ್ದು ಉಪಕಾರವಾಯ್ತು’ ಎಂದು ಖಡಕ್ಕಾಗಿ ನುಡಿದರು. ಯಾರಿಗೂ ಯಾವ ಮಾತು ಉಳಿದಿರಲಿಲ್ಲ.

**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿದ್ದಾರೆ. ಮೂರು ಕಾದಂಬರಿಗಳು, ಎರಡು ಕಥಾಸಂಕಲನಗಳು, ಕವನ ಸಂಕಲನಗಳು ಪ್ರಕಟವಾಗಿವೆ. ‘ಮಯೂರ’ವೂ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಕತೆಗಳು ಪ್ರಕಟವಾಗಿವೆ.